ಮಾಡುವುದು ? ಅಂಥ ಒಂದು ಅಮಾನವೀಯ ವ್ಯವಸ್ಥೆ ಇರುತ್ತದೆ. ಆ ದೃಷ್ಟಿಯಿಂದ ತಕ್ಷಣವೇ ಜನರೇಟರನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು. ಅಂಬ್ಯುಲೆನ್ಸ್ ಕೂಡ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು. ಕಾಲರ ಅಲ್ಲಿ ಹರಡುತ್ತಾ ಇದೆ. ಬೇರೆ ಕಡೆ ಹರಡುತ್ತಿರುವಂತೆ ನಮ್ಮ ಊರಿನಲ್ಲಿಯೂ ಕೂಡ ಕಾಲರಾ ಹರಡುತ್ತಿದೆ, ಒಂದು ಅಂಬುಲೆನ್ಸ್ ಕೂಡ ಇಲ್ಲ; ಇಂಥ ಪರಿಸ್ಥಿತಿ ಅಲ್ಲಿದೆ. ಆಂಬುಲೆನ್ಸ್ ರಿಪೇರಿಗೆ ಹೋಗಿದೆ ಎಂದು ಹೇಳುತ್ತಿರುತ್ತಾರೆ. ಯಾರನ್ನಾದರೂ ತುರ್ತು ಚಿಕಿತ್ಸೆಗೆ ಕಳುಹಿಸಬೇಕಾದರೆ ಏನು ಮಾಡಬೇಕು ? ಇಂಥ ಅವ್ಯವಸ್ಥೆಯನ್ನು ನಾವು ಅನುಭವಿಸುತ್ತಿದ್ದೇವೆ. ಆದ್ದರಿಂದ ತಾತ್ಕಾಲಿಕವಾಗಿ ಆ ಜನರೇಟರನ್ನು ಮತ್ತು ಅಂಬುಲೆನ್ಸ್‌ನ್ನು ತಕ್ಷಣ ಕೊಡಿಸುವಂಥ ವ್ಯವಸ್ಥೆಯನ್ನು ತಾವು ಕೈಗೊಳ್ಳುತ್ತೀರಾ ಎನ್ನುವುದಕ್ಕೆ ಸದನದ ಮೂಲಕ ನನಗೆ ಭರವಸೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ.ರಾಮಕೃಷ್ಣ:– ಮಾನ್ಯ ಸಭಾಪತಿಯವರೇ, ಅವರು ಕೇಳತಕ್ಕಂಥ ಪ್ರಶ್ನೆ ಬಹಳಷ್ಟು ಮಹತ್ವದ್ದು ಇದೆ. ಅದಕ್ಕಾಗಿ ಜನರೇಟರನ್ನು ತಕ್ಷಣವೇ ನಾವು ತರಿಸಲು ವ್ಯವಸ್ಥೆಯನ್ನು ಮಾಡುತ್ತೇವೆ ಮತ್ತು ಕಟ್ಟಡದ ಬದಲು ಈಗಾಗಲೇ ಬೇಕಾದಷ್ಟು ಖರ್ಚಾಗಿದೆ. ಈ ವರ್ಷವೂ ಅದಕ್ಕೆ ಬೇಕಾದಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ. ಈಗ ಕೈಗೆ ಎಷ್ಟು ಕೆಲಸವನ್ನು ತೆಗೆದುಕೊಂಡಿದ್ದೇವೆ, ಅಷ್ಟನ್ನು ತೀವ್ರಗತಿಯಲ್ಲಿ ಪೂರ್ಣಗೊಳಿಸಲು ನಾವು ಆದೇಶವನ್ನು ಕೊಡುತ್ತೇವೆ.

ಅಧ್ಯಕ್ಷರು:– ಈಗ ಸಿ.ಎಂ. ಲಿಂಗಪ್ಪನವರ ಪ್ರಶ್ನೆಯನ್ನು ಅವರ ಪರವಾಗಿ ಡಾ।। ನಂಜಪ್ಪನವರು ಕೇಳಬಹುದು.

ಸಹಾಯಕ ಶಿಕ್ಷಣಾಧಿಕಾರಿಗಳಿಗೆ ವಾಹನ

2050: ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ):–

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತಾಲ್ಲೂಕಿಗೊಬ್ಬರಂತೆ ಇರುವ ಸಹಾಯಕ ಶಿಕ್ಷಣಾಧಿಕಾರಿಗಳ ವ್ಯಾಪ್ತಿಗೆ ಸುಮಾರು ಎಷ್ಟು ಕಿರಿಯ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳು ಮತ್ತು ಬೋಧಕ ಮತ್ತು ಬೋಧಕೇತರ ವರ್ಗದವರು ಒಳಪಡುತ್ತಾರೆ;

ಆ) ಇಷ್ಟು ಸಂಖ್ಯೆ ಶಾಲೆಗಳನ್ನು ಮತ್ತು ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯನ್ನು ಉಸ್ತುವಾರಿ ಮಾಡಲು ಈ ಅಧಿಕಾರಿಗೆ ವಾಹನ ಸೌಕರ್ಯವನ್ನು ಕಲ್ಪಿಸಿಕೊಡಲಾಗಿದೆಯೇ;

ಇ) ಕೆಲಸವೇ ಇಲ್ಲದ ಕೆಲವು ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಜೀಪುಗಳನ್ನು ಕೊಟ್ಟಿರುವಾಗ ಇಷ್ಟೊಂದು ಹೆಚ್ಚಿನ ಸಂಖ್ಯೆಯ ಶಾಲೆಗಳನ್ನು ಮತ್ತು ಸಿಬ್ಬಂದಿಯನ್ನು ಉಸ್ತುವಾರಿ ನೋಡಿಕೊಳ್ಳಬೇಕಾಗಿರುವ ಸಹಾಯಕ ಶಿಕ್ಷಣಾಧಿಕಾರಿಗಳಿಗೆ ಒಂದು ಜೀಪು ಕೊಡುವುದು ಉಚಿತವಲ್ಲವೆ ?

ಡಾ।। ಹೆಚ್.ಡಿ. ಲಮಾಣಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):–

ಅ) ಸುಮಾರು 125 ಕಿರಿಯ ಪ್ರಾಥಮಿಕ ಶಾಲೆಗಳು ಮತ್ತು 90 ಹಿರಿಯ ಪ್ರಾಥಮಿಕ ಶಾಲೆಗಳು ಹಾಗೂ 750 ಶಿಕ್ಷಕ ಸಿಬ್ಬಂದಿ ವರ್ಗವೂ ಪ್ರತಿ ಸಹಾಯಕ ಶಿಕ್ಷಣಾಧಿಕಾರಿಯ ವ್ಯಾಪ್ತಿಗೆ ಒಳಪಡುತ್ತದೆ.

ಆ) ಇಲ್ಲ.

೩) ಈಗಾಗಲೇ ಇದರ ಬಗ್ಗೆ ಪರಿಶೀಲನೆ ನಡೆದಿದ್ದು ಆರ್ಥಿಕ ಕೊರತೆ ಇರುವ ಕಾರಣ ವಿಷಯವನ್ನು ಕೈಬಿಡಲಾಗಿದೆ.

ಡಾ॥ ಎನ್.ಬಿ. ನಂಜಪ್ಪ:– ಮಾನ್ಯ ಅಧ್ಯಕ್ಷರೇ, ತಾಲ್ಲೂಕಿಗೆ ಒಬ್ಬರಂತೆ ಸಹಾಯಕ ಶಿಕ್ಷಣಾಧಿಕಾರಿಗಳು ಇರುವುದು ನಿಜ. ಅವರು ಶಾಲೆಗಳಿಗೆ ಇನ್‌ಸ್ಪೆಕ್ಷನ್ ಮತ್ತೊಂದನ್ನೆಲ್ಲಾ ಮಾಡುವುದಕ್ಕೋಸ್ಕರ ವೆಹಿಕಲ್‌ನ್ನು ಕೊಟ್ಟರೆ ಮಾತ್ರ ಕೆಲಸ ಚೆನ್ನಾಗಿ ಆಗುತ್ತದೆಂದು ಹೇಳಿ ಪ್ರಶ್ನೆಯನ್ನು ಕೇಳಲಾಗಿದೆ. ತಾವು ಒಂದು ಜೀಪನ್ನು ಕೊಟ್ಟರೆ ವ್ಯವಸ್ಥಿತವಾಗಿ ಇನ್‌ಸ್ಪೆಕ್ಷನ್ ಎಲ್ಲ ನಡೆಸಿ ನೋಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ತಾವು ಏನೇನು ಕ್ರಮವನ್ನು ತೆಗೆದುಕೊಂಡಿರುತ್ತೀರಿ ಎನ್ನುವ ಬಗ್ಗೆ ನಾನು ಕೇಳುತ್ತಿದ್ದೇನೆ.

ಡಾ॥ ಹೆಚ್.ಡಿ. ಲಮಾಣಿ:– ಸನ್ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದಲ್ಲಿ ಸುಮಾರು 190 ಇಂಥ ತಾಲ್ಲೂಕ್ ಶಿಕ್ಷಣಾಧಿಕಾರಿಗಳು ಇದ್ದಾರೆ. ಒಬ್ಬ ಅಧಿಕಾರಿ ಸರ್ವೇಸಾಮಾನ್ಯವಾಗಿ ಸುಮಾರು 125 ಹಿರಿಯ ಪ್ರಾಥಮಿಕ ಶಾಲೆಗಳು, 90 ಪ್ರಾಥಮಿಕ ಶಾಲೆಗಳು, ಒಟ್ಟಿನಲ್ಲಿ ಬಹಳಷ್ಟು ಶಾಲೆಗಳನ್ನು ಇನ್‌ಸ್ಪೆಕ್ಷನ್ ಮಾಡುವಂಥ ಪರಿಸ್ಥಿತಿ ಇದೆ. ಅಷ್ಟೇ ಅಲ್ಲ, ಈ ನಾನ್‌ಟೀಚಿಂಗ್ ಸ್ಟಾಫ್ ಬಗ್ಗೆಯೂ ವೀಕ್ಷಣೆ ಮಾಡತಕ್ಕಂಥ ಒಂದು ಪರಿಸ್ಥಿತಿ ಇದೆ. ನಾನು ಸಹಿತ ಈ ಎ.ಇ.ಓ.ಗಳಿಗೆ ಒಂದು ವಾಹನವನ್ನು ಒದಗಿಸಬೇಕೆಂದು ಬಹಳಷ್ಟು ಕಾಳಜಿಯನ್ನು ವಹಿಸಿದ್ದೇನೆ. ಇಲ್ಲದಿದ್ದರೆ ಇನ್‌ಸ್ಪೆಕ್ಷನ್ ಮಾಡಲಿಕ್ಕೆ ಬಹಳ ಕಠಿಣವಾಗುತ್ತದೆ. ಇಷ್ಟೊಂದು ಶಾಲೆಗಳನ್ನು ಒಬ್ಬ ಎ.ಇ.ಓ. ಆಗಲೀ ಅಥವಾ ಇಬ್ಬರು ಇ.ಓ.ಗಳಾಗಲೀ ಅವರಿಗೆ ಇನ್‌ಸ್ಪೆಕ್ಟ್ ಮಾಡಲಿಕ್ಕೆ ಬಹಳ ತೊಂದರೆಯಾಗುತ್ತಿದೆ. ಅದಕ್ಕಾಗಿ ಒಂದು ಜೀಪನ್ನು ಕೊಡಿಸಬೇಕೆನ್ನುವಂಥ ಒಂದು ಪರಿಸ್ಥಿತಿಯಲ್ಲಿ ನಾವು ಈಗಾಗಲೇ ಫೈನಾನ್ಸ್ ಡಿಪಾರ್ಟ್‌ಮೆಂಟ್‌ಗೆ ಕೇಳಿದ್ದೆವು. ಆದರೆ ನಮಗೆ ಅದು ಸಾಧ್ಯವಾಗಲಿಲ್ಲ. ಈ ವಿಷಯವನ್ನು ಮತ್ತೊಮ್ಮೆ ಪರಿಶೀಲಿಸುತ್ತೇನೆ, ಮತ್ತು ಜೀಪ್‌ನ್ನು ಕೊಡಿಸುವಂಥ ಒಂದು ವ್ಯವಸ್ಥೆಯಲ್ಲಿ ನನ್ನ ಪ್ರಯತ್ನವೂ ಸಹಿತ ತಮ್ಮ ಜೊತೆಯಲ್ಲಿದೆ ಎಂದು ಅಧ್ಯಕ್ಷರ ಮೂಲಕ ಮಾನ್ಯಸದಸ್ಯರಿಗೆ ಹೇಳಬಯಸುತ್ತೇನೆ.

ಪಟ್ಟಣ ಪ್ರದೇಶಗಳಲ್ಲಿ ಹೆಚ್ಚುವರಿ ಶಾಲಾ ಕೊಠಡಿಗಳ ನಿರ್ಮಾಣ

409 (2116): ಹೆಚ್.ವೈ. ಮೇಟಿ (ಗುಳೇದಗುಡ್ಡ):–

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) 1990-91, 1991-92, ಮತ್ತು 1992-93ನೇ ಸಾಲಿನಲ್ಲಿ ರಾಜ್ಯದ ನಗರ ಮತ್ತು ಪಟ್ಟಣ ಪ್ರದೇಶದಲ್ಲಿ ಸರ್ಕಾರಿ ಪ್ರಾಥಮಿಕ ಶಾಲಾ ಹೆಚ್ಚುವರಿ ಕೊಠಡಿಗಳನ್ನು ನಿರ್ಮಾಣ ಮಾಡುವುದಕ್ಕಾಗಿ ಸರ್ಕಾರವು ಹಣ ಬಿಡುಗಡೆ ಮಾಡಲಾಗಿದೆಯೇ; ಹಾಗಿದ್ದಲ್ಲಿ ಸರ್ಕಾರದ ಆದೇಶ ಪತ್ರದ ಪ್ರತಿಗಳನ್ನು ಲಗತ್ತಿಸುವುದು;

ಆ) ಆಯಾ ಸಾಲಿನಲ್ಲಿ ಈ ಶಾಲಾ ಕೊಠಡಿಗಳಿಗಾಗಿ ಶಿಕ್ಷಣ ಸಚಿವರಿಗೆ ವಿನಂತಿ ಪತ್ರಗಳನ್ನು ಸಲ್ಲಿಸಿದ್ದ ವಿಧಾನಸಭೆ ಮತ್ತು ವಿಧಾನಪರಿಷತ್ತಿನ ಸದಸ್ಯರು ಯಾರ್ಯಾರು, ಆ ವಿನಂತಿ ಪತ್ರದ ಪ್ರಕಾರ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಇ) ಈ ಸಾಲಿನಲ್ಲಿ ಸರ್ಕಾರವು ಪ್ರಕಟಿಸಿರುವ ಆದೇಶ ಪತ್ರದಲ್ಲಿನ ಸ್ಥಳದ ಶಾಲೆಯ ಬದಲಿಗೆ ಬೇರೊಂದು ಶಾಲೆಯ ಕೊಠಡಿಗಳ ನಿರ್ಮಾಣಕ್ಕೆ ಹಣ ಹಸ್ತಾಂತರ ಮಾಡಬಹುದೆ, ಹಾಗಿದ್ದಲ್ಲಿ ಸರ್ಕಾರದ ಕ್ರಮವೇನು ?